# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 501 |
| ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 11.03.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 2 ವರ್ಷ ರಾಜ್ಯದಲ್ಲಿ ಅಕ್ರಮ ಮರಳು ಗಣಿಗಾರಿಕೆ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ: (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಕಳೆದ 02 ವರ್ಷಗಳಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಯಡಿ ಒಟ್ಟು 6755 ಪ್ರಕರಣಗಳನ್ನು ಆಯಾ ಜಿಲ್ಲಾ ಮರಳು ಸಮಿತಿಗಳಿಂದ ಪತ್ತೆ ಹಚ್ಚಿದ್ದು, ₹1877.63 ಲಕ್ಷಗಳ ದಂಡ ಹಾಗೂ 1846 ಮೊಕದ್ದಮೆಗಳನ್ನು ದಾಖಲಿಸಲಾಗಿರುತ್ತದೆ.<br>ಜಿಲ್ಲಾವಾರು ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ) | ಮರಳು ಗಣಿಗಾರಿಕೆಗೆ ಅನುಮತಿ ನೀಡಲು ಇರುವ ನಿಯಮಗಳೇನು: ಅಕ್ರಮ ಮರಳು ಗಣಿಗಾರಿಕೆ ತಡೆಯಲು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | • ಪ್ರಸ್ತುತ, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 31-U ರಲ್ಲಿ IV, V ಮತ್ತು ಉನ್ನತ ಶ್ರೇಣಿಯ ಹಳ್ಳ /ನದಿಗಳ ಪಾತ್ರಗಳಲ್ಲಿ ಲಭ್ಯವಿರುವ ಮರಳು ಬ್ಲಾಕ್ ಗಳನ್ನು ಸರ್ಕಾರದಿಂದ ಅಧಿಸೂಚನೆ ಮೂಲಕ ನಿಗದಿಪಡಿಸಿದ ಸರ್ಕಾರಿ ಇಲಾಖೆ ಅಥವಾ ಸರ್ಕಾರ ಸ್ವಾಮ್ಯದ ನಿಗಮ ಅಥವಾ ಮಂಡಳಿಗಳಿಗೆ ಮರಳು ಗಣಿಗಾರಿಕೆಗೆ ಅವಕಾಶ ಕಲ್ಪಿಸಲು ಮತ್ತು ಇ-ಟೆಂಡರ್ ಮೂಲಕ ಮರಳು ಗಣಿಗಾರಿಕೆಗೆ ಅನುಮತಿ ನೀಡಲು ನಿಯಮವಿರುತ್ತದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 31-Z ರಲ್ಲಿ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಪಟ್ಟಾ ಜಮೀನಿನ ಮಾಲೀಕರುಗಳಿಗೆ ಅಥವಾ ಪಟ್ಟಾ ಜಮೀನಿನ ಮಾಲೀಕರಿಂದ ಒಪ್ಪಿಗೆ ಪ್ರಮಾಣ ಪತ್ರ ಅಥವಾ GPA ಪತ್ರ ಪಡೆದು ಸಲ್ಲಿಸಿದವರೆಗೆ ಮರಳು ಗಣಿಗಾರಿಕೆಗೆ ಅನುಮತಿ ನೀಡಲು ನಿಯಮವಿರುತ್ತದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 31-ZB ರಲ್ಲಿ, ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ IV, V ಮತ್ತು ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿ ಲಭ್ಯವಿರುವ ಮರಳು ಬ್ಲಾಕ್ ಗಳನ್ನು ಜಿಲ್ಲೆಯ ಸಾಂಪ್ರದಾಯಿಕ ಮರಳು ತೆಗೆಯುವ ವ್ಯಕ್ತಿಗಳಿಗೆ ಟೆಂಡರ್ ಕಂ-ಹರಾಜು ಮೂಲಕ ಮರಳು ಬ್ಲಾಕ್ ಗಳನ್ನು ಹಂಚಿಕೆ ಮಾಡಲು ನಿಯಮವಿರುತ್ತದೆ. |

. . . 2

| | | |
|---|---|---|
| | | • ರಾಜ್ಯದಲ್ಲಿ ಅನಧಿಕೃತ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನನ್ನು ತಡೆಗಟ್ಟಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಗಳನ್ನು ರಚಿಸಲಾಗಿರುತ್ತದೆ.<br>• ಸದರಿ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ.<br>• ಸದರಿ ಸಮಿತಿಯ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ತಡೆಯಲು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಹಾಗೂ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994 ರಡಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ.<br>• ಜಿಲ್ಲಾ ವ್ಯಾಪ್ತಿಯಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಯಿಂದ ಚಾಲಿತದಳ ತಂಡವನ್ನು ರಚಿಸಿಕೊಂಡು ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ವಹಿಸಲಾಗುತ್ತಿದೆ.<br>• ಮರಳು ಹಾಗೂ ಇತರೆ ಉಪಖನಿಜ ಸಾಗಾಣಿಕೆ ವಾಹನಗಳ ಚಲನವಲನಗಳ ಮೇಲೆ ನಿಗಾವಹಿಸಲು ಕೇಂದ್ರಿಕೃತ One state One GPS ವ್ಯವಸ್ಥೆಯನ್ನು ಜಾರಿಗೊಳಿಸಲಾಗಿರುತ್ತದೆ.<br>• ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು "ಖನಿಜ ಸಂರಕ್ಷಣಾ ಪಡೆ" ಯನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ.<br>• ಅದರಂತೆ, ರಾಜ್ಯದಲ್ಲಿ ಕಳೆದ 02 ವರ್ಷಗಳಲ್ಲಿ ಅನಧಿಕೃತ ಗಣಿಗಾರಿಕೆ ಚಟುವಟಕೆಗಳಡಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಿಂದ ಕ್ರಮ ಕೈಗೊಂಡ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಇ) | ಇತ್ತೀಚಿಗಿನ ದಿನಗಳಲ್ಲಿ ಅಕ್ರಮ ಗಣಿಗಾರಿಕೆ ತಡೆಯಲು ಹೋದ ಭದ್ರಾವತಿಯ ತಹಶೀಲ್ದಾರರಿಗೆ ಸ್ಥಳೀಯ ಶಾಸಕರ ಮಗ ಬೆದರಿಕೆ ಹಾಕಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ; - | ಇಲ್ಲ.<br>ಆದರೆ, ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಶಿವಮೊಗ್ಗ ಕಛೇರಿಯ ಭೂವಿಜ್ಞಾನಿಯವರು, ಭದ್ರಾವತಿ ತಾಲ್ಲೂಕು, ಸಿಗೇಬಾಗಿ ಗ್ರಾಮದ ಭದ್ರಾ ನದಿ ಪಾತ್ರದ ವ್ಯಾಪ್ತಿಯಲ್ಲಿ ಅನಧಿಕೃತ ಗಣಿಗಾರಿಕೆ ಚಟುವಟಿಕೆಯನ್ನು ತಡೆಗಟ್ಟಲು ಹೋದ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯು ದೂರವಾಣಿಯ ಮೂಲಕ ಅವಾಚ್ಯ ಶಬ್ದಗಳಿಂದ ನಿಂದಿಸಿ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿರುವುದು ಗಮನಕ್ಕೆ ಬಂದಿರುತ್ತದೆ.<br>• ಈ ಕುರಿತು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ, ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಶಿವಮೊಗ್ಗ ಕಛೇರಿಯ ಭೂವಿಜ್ಞಾನಿಯವರು ಭದ್ರಾವತಿ ತಾಲ್ಲೂಕು, ಸಿಗೇಬಾಗಿ ಗ್ರಾಮದ ಭದ್ರಾ ನದಿ ಪಾತ್ರದ ವ್ಯಾಪ್ತಿಯಲ್ಲಿ - |

. . . 3

| | | |
|---|---|---|
| | -ಇಲಾಖಾ ವತಿಯಿಂದ ಸದರಿ ಮಹಿಳಾ ತಹಶೀಲ್ದಾರರ ರಕ್ಷಣೆಗೆ ಕೈಗೊಂಡ ಕ್ರಮಗಳೇನು; ಇಲಾಖಾ ವತಿಯಿಂದ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಲಾಗಿದೆಯೇ? (ವಿವರ ನೀಡುವುದು) | -ಅನಧಿಕೃತ ಗಣಿಗಾರಿಕೆ ಚಟುವಟಿಕೆಯನ್ನು ತಡೆಗಟ್ಟಲು ಹೋದ ಸಂದರ್ಭದಲ್ಲಿ, ದೂರವಾಣಿ ಮೂಲಕ ಅವಾಚ್ಯ ಶಬ್ದಗಳಿಂದ ನಿಂದಿಸಿ ಸರ್ಕಾರ ಕೆಲಸಕ್ಕೆ ಅಡ್ಡಿಪಡಿಸಿರುವ ವ್ಯಕ್ತಿಯ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಹಾಗೂ ಇಲಾಖೆಯಿಂದ ಅಧಿಕಾರಿ/ ಸಿಬ್ಬಂದಿಗಳು ಅನಧಿಕೃತ ಗಣಿಗಾರಿಕೆ ಚಟುವಟಿಕೆಗಳ ಪರಿಶೀಲನೆಗೆ ಹೋದ ಸಂದರ್ಭದಲ್ಲಿ ಕಾರ್ಯ ವ್ಯಾಪ್ತಿಯ ಪೊಲೀಸ್ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳನ್ನು ನಿಯೋಜಿಸುವ ಸಂಬಂಧ ಸೂಕ್ತ ನಿರ್ದೇಶನ ನೀಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ.<br>• ಪೊಲೀಸ್ ಉಪ ನಿರೀಕ್ಷಕರು, ಓಲ್ಡ್ ಟೌನ್ ಪೊಲೀಸ್ ಠಾಣೆ, ಭದ್ರಾವತಿ ಇಲ್ಲಿ ದಿನಾಂಕ 11.02.2025 ರಂದು ಪ್ರಥಮ ವರ್ತಮಾನ ವರದಿ ಸಂಖ್ಯೆ 23/2025 ರಂತೆ ಪ್ರಕರಣ ದಾಖಲಿಸಲಾಗಿರುತ್ತದೆ. |

ಸಂಖ್ಯೆ ಸಿಐ-ಎಂಎಂಎನ್/65/2024

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ಅನುಬಂಧ-1

## 2023–24ನೇ ಸಾಲಿನ ಜಿಲ್ಲಾ ಮರಳು ಸಮಿತಿಯ ವಿವಿಧ ಇಲಾಖೆಗಳಿಂದ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳಡಿ ಸಂಗ್ರಹಿಸಲಾಗಿರುವ ದಂಡದ ಮೊತ್ತ ಮತ್ತು ಮೊಕದ್ದಮೆ ದಾಖಲಿಸಿರುವ ವಿವರಗಳು

| ಕ್ರ. ಸಂ. | ಜಿಲ್ಲೆ | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿರುವ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ FIR / CC |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 0 | 0 | 0 |
| 2 | ಬೆಂಗಳೂರು ನಗರ | 1 | 0.46 | 0 |
| 3 | ತುಮಕೂರು | 26 | 3.92 | 12 |
| 4 | ಕೋಲಾರ | 18 | 4.87 | 0 |
| 5 | ಚಿಕ್ಕಬಳ್ಳಾಪುರ | 44 | 12.69 | 16 |
| 6 | ರಾಮನಗರ | 28 | 10.94 | 11 |
| 7 | ದಾವಣಗೆರೆ | 152 | 33.53 | 6 |
| 8 | ಚಿತ್ರದುರ್ಗ | 88 | 22.23 | 22 |
| 9 | ಶಿವಮೊಗ್ಗ | 310 | 104.71 | 3 |
| 10 | ಮೈಸೂರು | 35 | 2.62 | 21 |
| 11 | ಮಂಡ್ಯ | 29 | 2.9 | 17 |
| 12 | ಚಾಮರಾಜನಗರ | 15 | 3.58 | 0 |
| 13 | ಹಾಸನ | 76 | 17.31 | 40 |
| 14 | ದಕ್ಷಿಣ ಕನ್ನಡ | 296 | 179.72 | 33 |
| 15 | ಉಡುಪಿ | 204 | 46.4 | 3 |
| 16 | ಕೊಡಗು | 37 | 7.41 | 4 |
| 17 | ಚಿಕ್ಕಮಗಳೂರು | 55 | 5.47 | 32 |
| 18 | ಕಲಬುರಗಿ | 199 | 81.23 | 39 |
| 19 | ರಾಯಚೂರು | 568 | 56.82 | 403 |
| 20 | ಬೀದರ್ | 51 | 17.87 | 1 |
| 21 | ಬಳ್ಳಾರಿ | 61 | 10.39 | 0 |
| 22 | ಹೊಸಪೇಟೆ | 173 | 24.97 | 114 |
| 23 | ಯಾದಗಿರಿ | 163 | 18.83 | 113 |
| 24 | ಕೊಪ್ಪಳ | 431 | 121.71 | 99 |
| 25 | ಬೆಳಗಾಂ | 98 | 19.37 | 32 |
| 26 | ವಿಜಯಪುರ | 83 | 32.14 | 27 |
| 27 | ಧಾರವಾಡ | 47 | 16.8 | 0 |
| 28 | ಗದಗ | 243 | 119.49 | 37 |
| 29 | ಹಾವೇರಿ | 191 | 58.88 | 6 |
| 30 | ಬಾಗಲಕೋಟೆ | 229 | 49.68 | 11 |
| 31 | ಉತ್ತರ ಕನ್ನಡ | 125 | 47.45 | 4 |
| | ಒಟ್ಟು | 4076 | 1134.39 | 1106 |

CI-MMN-64-2025

Deputy Director (Min. Admn)
Dept. of Mines & Geology

ಅನುಬಂಧ-1

## 2024–25ನೇ (ಜನವರಿ ಅಂತ್ಯಕ್ಕೆ) ಸಾಲಿನ ಜಿಲ್ಲಾ ಮರಳು ಸಮಿತಿಯ ವಿವಿಧ ಇಲಾಖೆಗಳಿಂದ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳಡಿ ಸಂಗ್ರಹಿಸಲಾಗಿರುವ ದಂಡದ ಮೊತ್ತ ಮತ್ತು ಮೊಕದ್ದಮೆ ದಾಖಲಿಸಿರುವ ವಿವರಗಳು

| ಕ್ರ. ಸಂ. | ಜಿಲ್ಲೆ | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿರುವ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ FIR / CC |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 0 | 0 | 0 |
| 2 | ಬೆಂಗಳೂರು ನಗರ | 1 | 0.45 | 0 |
| 3 | ತುಮಕೂರು | 12 | 4.97 | 10 |
| 4 | ಕೋಲಾರ | 10 | 2.42 | 0 |
| 5 | ಚಿಕ್ಕಬಳ್ಳಾಪುರ | 26 | 6.74 | 0 |
| 6 | ರಾಮನಗರ | 8 | 3.4554 | 5 |
| 7 | ದಾವಣಗೆರೆ | 128 | 32.82 | 0 |
| 8 | ಚಿತ್ರದುರ್ಗ | 62 | 17.81 | 0 |
| 9 | ಶಿವಮೊಗ್ಗ | 135 | 64.08 | 12 |
| 10 | ಮೈಸೂರು | 0 | 0 | 0 |
| 11 | ಮಂಡ್ಯ | 27 | 9 | 12 |
| 12 | ಚಾಮರಾಜನಗರ | 4 | 1.3 | 0 |
| 13 | ಹಾಸನ | 54 | 13.86 | 24 |
| 14 | ದಕ್ಷಿಣ ಕನ್ನಡ | 173 | 54.04 | 82 |
| 15 | ಉಡುಪಿ | 103 | 19.07 | 0 |
| 16 | ಕೊಡಗು | 24 | 4.12 | 0 |
| 17 | ಚಿಕ್ಕಮಗಳೂರು | 44 | 12.8 | 17 |
| 18 | ಕಲಬುರಗಿ | 222 | 30.17 | 143 |
| 19 | ರಾಯಚೂರು | 348 | 29.36 | 246 |
| 20 | ಬೀದರ್ | 32 | 10.847 | 3 |
| 21 | ಬಳ್ಳಾರಿ | 59 | 13.63 | 0 |
| 22 | ಹೊಸಪೇಟೆ | 56 | 14.162 | 44 |
| 23 | ಯಾದಗಿರಿ | 192 | 39.91 | 64 |
| 24 | ಕೊಪ್ಪಳ | 104 | 30.54 | 8 |
| 25 | ಬೆಳಗಾಂ | 91 | 17.457 | 9 |
| 26 | ವಿಜಯಪುರ | 0 | 0 | 0 |
| 27 | ಧಾರವಾಡ | 43 | 18.26 | 1 |
| 28 | ಗದಗ | 144 | 88.32 | 11 |
| 29 | ಹಾವೇರಿ | 238 | 103.74 | 47 |
| 30 | ಬಾಗಲಕೋಟೆ | 216 | 64.03 | 2 |
| 31 | ಉತ್ತರ ಕನ್ನಡ | 123 | 35.88 | 0 |
| ಒಟ್ಟು | | **2679** | **743.24** | **740** |

CI - MMN - 64 - 2025

Deputy Director (Min. Admn)
Dept. of Mines & Geology